

# ಕನ್ನಡದಲ್ಲಿ ದಿವ್ಯತ್ರಯರನ್ನು ಕುರಿತ ಕಾವ್ಯ ಸಾಹಿತ್ಯ

ಡಾ. ಸಿ.ಪಿ.ಕೆ.

ಕನ್ನಡದ ಹೆಸರಾಂತ ಕವಿಗಳು ದಿವ್ಯತ್ರಯರ ಬಗೆಗೆ ಹಲವು ಕಾವ್ಯರಚನೆಗಳನ್ನು ರಚಿಸಿದ್ದು, ಅವು ಅಗಾಧ ಸಾಹಿತ್ಯರಾಶಿಯಲ್ಲಿ ಅಡಗಿ ಕುಳಿತಿವೆ. ಅವನ್ನೆಲ್ಲ ಒಂದೆಡೆ ಕಲೆಹಾಕಿ 'ಸುರನದಿಯ ತೀರ್ಥ' ಎಂಬ ಸಂಕಲನವನ್ನು ಪ್ರಸ್ತುತ ಲೇಖಕರು ಹೊರತಂದಿದ್ದಾರೆ. ಈ ಕಾವ್ಯರಚನೆಗಳನ್ನು ಕುರಿತು ವಿವರಿಸಿರುವ ಲೇಖಕರು ಕನ್ನಡದ ಸುಪ್ರಸಿದ್ಧ ಬರಹಗಾರರು. ಮುನ್ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಗ್ರಂಥಗಳನ್ನು ರಚಿಸಿ ಪ್ರಕಟಿಸಿರುವ ಅವರು ಮೈಸೂರು ಆಶ್ರಮದ ಭಕ್ತರೂ ಆಗಿದ್ದಾರೆ. ಸ್ವತಃ ಇವರೇ ಕವಿಗಳು; ದಿವ್ಯತ್ರಯರ ಬಗೆಗೂ ಅನೇಕ ಕವಿತೆಗಳನ್ನು ಹಾಗೂ ಖಂಡಕಾವ್ಯಗಳನ್ನು ರಚಿಸಿದ್ದಾರೆ.

೧

**ಭಾ**ರತೀಯ ಭಾಷೆಗಳಲ್ಲಿ ಬಹುಶಃ ಬಂಗಾಳಿಯನ್ನು ಬಿಟ್ಟರೆ, ದಿವ್ಯತ್ರಯರನ್ನು ಕುರಿತ ಸಾಹಿತ್ಯ, 'ಕಾವ್ಯಸಾಹಿತ್ಯ'ವೂ ಸೇರಿದಂತೆ, ಕನ್ನಡದಲ್ಲೆ ವಿಪುಲವೆಂದು ತೋರುತ್ತದೆ. ಆ ಕಾವ್ಯ ವಲಯದಲ್ಲಿ ಕುವೆಂಪು ಅವರ ಕಾವ್ಯದ್ದು ಸಿಂಹಪಾಲು! ಹಾಗೆ ನೋಡಿದರೆ, ಅವರ ಗದ್ಯ, ಪದ್ಯಗಳ ನಡುವೆ ಹೆಚ್ಚು ಭೇದ ವೇನೂ ಕಾಣಿಸದು. ಉದಾತ್ತವಾದ, ರಮ್ಯೋಜ್ವಲ ಶೈಲಿ ಕುವೆಂಪು ಅವರದು; ಅದು ವಿಶೇಷವಾಗಿ ರೂಪಕಪ್ರಚುರವಾದುದು. ಅವರ ಪ್ರತಿಭೆ ಭವ್ಯತಾಸ್ಪರ್ಶಿಯಾಗಿದ್ದು, ವಿದ್ಯುತ್ತರಂಗಗಳನ್ನೆ ಚಿಮ್ಮುತ್ತದೆ!

ಮುಖ್ಯವಾದ ಮಾತೆಂದರೆ, ದಿವ್ಯತ್ರಯರ ಲೋಕೋತ್ತರ ಬದುಕಿನ ಮತ್ತು ವ್ಯಕ್ತಿತ್ವದ ಸಾರವನ್ನು ಸಂಗ್ರಹಿಸಿ, ಸಮಾಜಕ್ಕೆ ಮತ್ತು ಜಗತ್ತಿಗೆ ಅವರ ಅನನ್ಯ, ಶಿಖರಪ್ರಾಯ ಕೊಡುಗೆಯನ್ನು ನಿಖರವಾಗಿ ಗುರುತಿಸಿದ್ದಾರೆ, ಕುವೆಂಪು.

ಎಷ್ಟೋ ಕಡೆ ಕೆಲವು ವೈಯಕ್ತಿಕ ಸಂಗತಿಗಳೂ ಮಿಳಿತವಾಗಿರುವುದು ಅವರ ಕವನಗಳ ವೈಶಿಷ್ಟ್ಯ. ಆದ್ದರಿಂದ ಅವು ಕವಿಯ (ಸ್ವ) 'ಭಾವಗೀತೆ'ಗಳಾಗಿ ಪರಿಣಮಿಸಿವೆ ಎನ್ನಬಹುದು!

೨

ಮೊದಲು ಶ್ರೀರಾಮಕೃಷ್ಣ ಪರಮಹಂಸರನ್ನು ಕುರಿತ ಕವನಗಳನ್ನು ಲಕ್ಷಿಸಬಹುದು. ಈ ದಿಶೆಯಲ್ಲಿ ಹೆಚ್ಚು ಕವನಗಳನ್ನು ರಚಿಸಿರುವವರು ''ಶ್ರೀ ರಾಮಕೃಷ್ಣ ಭಗವದ್ ಗೋತ್ರ ಸಂಜಾತ'' ಕುವೆಂಪು ಅವರು; ಸಹಜವೇ.

'ಶ್ರೀ ರಾಮಕೃಷ್ಣ ಸುಪ್ರಭಾತ'ದಿಂದ ಆರಂಭಿಸಬಹುದು. ಶ್ರೀ ರಾಮಕೃಷ್ಣರನ್ನು ಕತ್ತಲೆ ಕಳೆಯುವ ಸೂರ್ಯನೆಂದು (ಎಲ್ಲೆಡೆ) ಕಲ್ಪಿಸಿಕೊಂಡಿದ್ದಾರೆ, ಕುವೆಂಪು:

ಹೊಮ್ಮುತಿದೆ ಮೂಡಣದಿ ಹೊಂಬೆಳಗರುಣ ಕಾಂತಿ;
ಓಡುತಿದೆ ಹಿಂಜರಿದು ತಿಮಿರದ ತಮೋ ಭ್ರಾಂತಿ.....

ಬೇರೆ ಬೇರೆ ಕಾಲದೇಶಗಳಲ್ಲಿ ಶ್ರೀರಾಮಕೃಷ್ಣರು ಆವಿರ್ಭವಿಸಿದ್ದನ್ನು ಹೇಳುತ್ತಾರೆ, ಕುವೆಂಪು:

ತ್ರೇತೆಯೊಳ್ ಶ್ರೀರಾಮನೋಲವತರಿಸಿ ಬಂದೆ;
ದ್ವಾಪರದೊಳು ಕೃಷ್ಣ ಶ್ರೀರೂಪದೊಳು ನಿಂದೆ
ಸರ್ವ ಧರ್ಮಾವತಾರಂ ಕಲಿಯುಗದಿ ಸಂದೆ...
ನಜರೇತಿನಲ್ಲಿ ಯೇಸು ಸ್ವಾಮಿಯಾಗಿದ್ದೆ;
ನದಿಯದೊಳ್ ಶ್ರೀಕೃಷ್ಣ ಚೈತನ್ಯನಾಗಿದ್ದೆ:
ಮತ್ತೆ ಭಾರತದಲ್ಲಿ ನೀ ಮೈದೋರುತೆದ್ದೆ......

''ನಿನ್ನಿಂದೆ ಆಧ್ಯಾತ್ಮ ವೈಜ್ಞಾನಿಕ ಕ್ರಾಂತಿ'' ಎಂದಿರುವುದು ಅರ್ಥಪೂರ್ಣವಾಗಿದೆ. ವಸ್ತುತಃ ಶ್ರೀರಾಮಕೃಷ್ಣ ಯೋಗಿ ಅಧ್ಯಾತ್ಮ, ವಿಜ್ಞಾನಿಗಳ ಸಂಯೋಗ. ಅವರನ್ನು ''ಸರ್ವಾವತಾರ ಸಂಪೂರ್ಣ ವಿಭು'' ಎಂದು ಕರೆಯುತ್ತಾರೆ ಕವಿ.

'ಶ್ರೀಗುರುದೇವನಿಗೆರಗುವೆನು' ಕವನದಲ್ಲಿ ''ಸರ್ವಧರ್ಮಗಳ ವಾರಿಧಿ'', ''ಬ್ರಹ್ಮಾನಂದ ಮಹೋದಧಿ'' ಎಂದು ಸ್ತುತಿಸುತ್ತಾರೆ, ಕುವೆಂಪು. ಇದು ಮಹತ್ವದ ಉಕ್ತಿ:

ನನ್ನೆದೆಯಲಿ ಮನೆ ಮಾಡಿದಗೆ
ಕವಿತೆಯ ನೀಡಿದಗೆ .....

ತಮ್ಮ ಕಾವ್ಯನಿರ್ಮಾಣ ಶಕ್ತಿ ಶ್ರೀ ರಾಮಕೃಷ್ಣ ಪ್ರಣೀತವಾದುದೆಂದು ಕುವೆಂಪು ನಂಬುಗೆ.

'ಗುರುದೇವನಿಗೆ' ಕವನದಲ್ಲಿ ''ನೀ ನನ್ನ ಜೀವನಧ್ರುವ ತಾರೆ'' ಎಂದೂ ''ನೀನಿಳೆಗೆ ಮೈದೋರೆ ಮುಕ್ತಿಯರಳಿತು'' ಎಂದೂ ಹೇಳುತ್ತಾರೆ, ಕವಿ.

'ಸಂಧ್ಯಾಯಾತ್ರೆ' ಒಂದು ವಿಶಿಷ್ಟ ಕವನ.

ಸಂಜೆಯಾಗಲು ತವಕಿಸುವುದು ಮನ
ದಕ್ಷಿಣೇಶ್ವರ ಯಾತ್ರೆಗೆ,
ಪರಮಹಂಸರ ತೀರ್ಥವಾಣಿಯ
ಪಂಚ ಅಮೃತದ ಪಾತ್ರೆಗೆ;

ಎಂದು ಹೇಳುವ ಕುವೆಂಪು, ಅಲ್ಲಿ ಮಹೇಂದ್ರ ಗುಪ್ತ, ನರೇಂದ್ರ, ಕೇಶವಚಂದ್ರ ಸೇನ, ಗಿರೀಶ ಘೋಷರನ್ನು ಕಾಣುವುದಾಗಿ ಹೇಳಿಕೊಳ್ಳುತ್ತಾರೆ.

'ಶ್ರೀಗುರು' ಕವನದಲ್ಲಿ ಶ್ರೀರಾಮಕೃಷ್ಣರ ವಿರಾಡ್ರೂಪವನ್ನೂ ಕಂಡರಿಸುತ್ತಾರೆ, ಕುವೆಂಪು:

ಶಿರವ ನಾಕದೊಳಿರಿಸಿ, ಚರಣಗಳೆರಡ ಭೂತಳದಿ,
ಗುರು ಹಿಮಾಚಲದಂತೆ ನಿಂತಿಹೆ ಶಾಂತಿಯಾಶ್ರಯನೆ,
ಹೃದಯ ನಿನ್ನದು ಮೇರೆಯಿಲ್ಲದ ರುಂದ್ರವಾರಿನಿಧಿ:
ಚಲಿತ ಮತಗಳ ಚಂದ್ರನಾವೆಗಳಲ್ಲಿ ತೇಲುತಿವೆ!

ಕ್ರಿಸ್ತ, ಮಹಮದ, ರಾಮಕೃಷ್ಣ, ಜೊರಾಸ್ತ, ಗೌತಮ, ವೇದ, ಕೊರಾನು, ಬೈಬಲು, ತಲ್ಮಡ್, ಗುಡಿ, ಚರ್ಚು, ಮಸೀದಿ, ಆಶ್ರಮ, ಅಗ್ನಿಪೂಜೆ, ಕಾಶಿ, ಮಕ್ಕಗಳೆಲ್ಲ ಶ್ರೀರಾಮಕೃಷ್ಣರೊಳಗೆ ಐಕ್ಯವಾ'ಗಿಹವು' ಎಂದು ಹೇಳುತ್ತಾರೆ, ಕುವೆಂಪು.

ತಮ್ಮ ಜನ್ಮಭೂಮಿಯಾದ ಮಲೆನಾಡಿಗೆ ಶ್ರೀರಾಮಕೃಷ್ಣರನ್ನು ಕವಿ ಆಮಂತ್ರಿಸುವ ಪರಿಯಿದೆ, 'ಆಹ್ವಾನ'ದಲ್ಲಿ:

ಬಾ ಶ್ರೀ ಗುರುದೇವನೆ ಬಾ
ಶ್ಯಾಮಲ ಕಾನನ ಶೃಂಗತರಂಗಿತ
ಸಹ್ಯಾದ್ರಿಯ ಸುಂದರ ಮಂದಿರಕೆ....

'ಎಂಟು ತಿಂಗಳು' ಒಂದು ಅಪೂರ್ವ ಕವಿತೆ. (ಇಲ್ಲಿ ಉಕ್ತವಾಗಿರುವ ವಿಷಯ ಪರಮಹಂಸರ ಜೀವನಚರಿತ್ರೆಯಲ್ಲಿ ಸೂಕ್ಷ್ಮವಾಗಿ ಉಲ್ಲೇಖಗೊಂಡಂತಿಲ್ಲ.) ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆ ತಮ್ಮ ಯೌವನದಲ್ಲಿ ಎಂಟು ತಿಂಗಳು ಹಸುಳೆಗಳಂತೆ ಏಕಶಯ್ಯೆಯಲ್ಲಿ ಮಲಗಿ, ಮಹೋಗ್ರ ಅಗ್ನಿಪರೀಕ್ಷೆಯಲ್ಲಿ ಉತ್ತೀರ್ಣರಾದುದನ್ನು ಹೇಳಿ ಅಚ್ಚರಿಯಿಂದ ಪ್ರಶ್ನಿಸುತ್ತಾರೆ, ಕುವೆಂಪು:

ಇದುವರೆಗಿನ ಜಗದದ್ಭುತ ಕೋಟಿ ಪವಾಡಗಳೆಲ್ಲ
ನಾಚಿ ತಲೆತಗ್ಗಿಸಿ ಮೈಗರೆಯುವಂತಾಯ್ತಲಾ!
ಶ್ರೀಮಾತೆಗೊ? ಶ್ರೀಗುರುವಿಗೊ? ಯಾರಿಗೆ ಬೆರಗಾಗಲಿ ನಾನು?!

'ಶತಮಾನ ಸಂಧ್ಯೆಯೊಂದು ನೀಳ್ಗವನ; ಭಾವಗೀತೆಯಾಗಿಯೂ 'ಮಹಾ' ಎಂಬ ವಿಶೇಷಣಕ್ಕೆ ಯೋಗ್ಯವಾದುದು! ಕವಿ ಹೀಗೆ ಆಶ್ವಾಸಿಸುತ್ತಾರೆ, ಅದರಲ್ಲಿ:

ನಿಷ್ಫಲವೇಂ ಶತವರ್ಷದ
ಗುರುದೇವನ ಶತಮಾನ?..
ಗುರುದೇವನ ಚೈತನ್ಯಕೆ
ನನ್ನುದ್ಧಾರವೆ ಸಾಕ್ಷಿ!...
ಯುಗಚಕ್ರವ ಮುನ್ನೂಂಕಲು
ಇದೆ ಗುರುದೇವನ ಶಕ್ತಿ!...

ಇನ್ನು ಕುವೆಂಪು ಅವರನ್ನು ಬಿಟ್ಟು, ಉಳಿದ ಕವಿಗಳತ್ತ ತಿರುಗಬಹುದು. ದ.ರಾ.ಬೇಂದ್ರೆಯವರು 'ಶ್ರೀರಾಮಕೃಷ್ಣೋದಯ'ದಲ್ಲಿ ''ಕಾಳ ಕತ್ತಲೆಗೆ ಅಸ್ತವನ್ನು ವಿಧಿಸಿ'', ''ಪೂರ್ವಪಶ್ಚಿಮವು ಕೈಯ ಕುಲುಕಿ ಕೊಳುಕೊಡೆಯ ನಡೆಸುವಂತೆ'' ಇತ್ಯಾದಿಯಾಗಿ ಹೇಳಿ, ದಿವ್ಯತ್ರಯರನ್ನ ಉದ್ದೇಶಿಸಿ, ''ತ್ಯಾಗಭೋಗದಾ ಪೂರ್ಣಯೋಗವಾಗಿರಲಿ ಈ ತ್ರಿವೇಣಿ'' ಎನ್ನುತ್ತಾರೆ.

'ಶ್ರೀ ರಾಮಕೃಷ್ಣ ಪರಮಹಂಸ' ಕವನದಲ್ಲಿ ಡಿ.ವಿ.ಜಿ. ''ನಾಸ್ತಿಕ್ಯತಿಮಿರಹರ ಚಂಡಭಾಸ್ಕರ'', ''ವೈರಾಗ್ಯರಾಜ್ಯಾಧಿರಾಜ'' ಎಂದು ವಿಶೇಷಿಸುತ್ತಾರೆ, ರೂಪಕಗಳಲ್ಲಿ.

ಜಿ.ಎಸ್.ಶಿವರುದ್ರಪ್ಪನವರ 'ದಕ್ಷಿಣೇಶ್ವರದಲ್ಲಿ' ಎಂಬ ಕವಿತೆ ಪರಮಹಂಸರನ್ನು 'ಬೆಳ್ಳಿ ಹಡಗು' ಎಂದು ಕರೆದು, ಕಡೆಯಲ್ಲಿ ವಿಷಾದದ ಎಳೆಯನ್ನು ತಳೆಯುತ್ತದೆ:

ನೂರು ತಾರೆಯೊಡನೆ ಚಂದ್ರ ಬಿಜಯಂಗೈದ ನಭದೊಲು
ನಿನ್ನ ಲೀಲೆ ರಮ್ಯವಾಯ್ತು ಅಂದು ಇದೇ ನೆಲದೊಳು
ಬಂದವರನು ಕರೆದುಕೊಂಡು ಬೆಳ್ಳಿಹಡಗು ನಡೆಯಲು
ಮಬ್ಬು ಕವಿದ ಬಂದರಿನೊಳು ಅರಸುತಿಹೆವು ಬೆಳಕನು!

ಪ್ರಭುಶಂಕರ ಅವರ 'ಅಮೃತಶಿಲ್ಪ' ಎಂಬ ದೀರ್ಘ ಕವನ ನಾಟಕೀಯತೆಯಿಂದ ಕೂಡಿ, ಪರಿಣಾಮಕಾರಿಯಾಗಿದೆ. ''ಬಾಗಿಲಿಲ್ಲ, ಬಾಗಿಲೆಲ್ಲ'' ಮುಂತಾದ ಪಂಕ್ತಿಗಳು ಹೃದಯಸ್ಪರ್ಶಿಯಾಗಿವೆ.

ಇದು'ಶರಣಾಗತಿ'ಯಲ್ಲಿ 'ಜಯದೇವ' ಅವರ (ಪ್ರೊ. ಪ್ರಭುಪ್ರಸಾದ್) ಉದ್ಗಾರ:

ಶ್ರೀಗುರುನಾಮದ ನಾವೆಯು ದೊರೆತರೆ
ಭವಸಾಗರಯಾನವೆ ಮೋದಕರ.

'ಸರ್ವಸಾಕ್ಷಾತ್ಕಾರ' ಎಂದು ಶ್ರೀರಾಮಕೃಷ್ಣರನ್ನು ಕರೆಯುವ ಸಿಂಪಿ ಲಿಂಗಣ್ಣನವರು ಹೇಳುತ್ತಾರೆ:

ನಿನ್ನ ಜೀವನಕಥೆಯ ನೆನೆದ ಮಾನವನಿಂದು
ಬೆರಗುಬಡುವನು ನಿನ್ನ ಹುಟ್ಟು ನಿಜವೇನೆಂದು.

ಮತ್ತೂ ನುಡಿಯುತ್ತಾರೆ: ''ಸ್ಥೂಲ ಭೋಗವ ಮರೆದು, ಆತ್ಮಭೋಗಕೆ ಮೊರೆದು....''

'ಗುರುಕರುಣ'ದಲ್ಲಿ ಕಯ್ಯಾರ ಕಿಞ್ಞಣ್ಣ ರೈ ಬೇಡುತ್ತಾರೆ: ''ದೂಡಿಬಿಡಬೇಡ ಕಾಡಹೂವೆಂದು...''

ಸಿ.ಪಿ.ಕೆ.ಯವರು 'ದಕ್ಷಿಣೇಶ್ವರ ಶರಣ ಚರಣವೆ' ಕವನದಲ್ಲಿ ಶ್ರೀರಾಮಕೃಷ್ಣರನ್ನು ''ಅಭವದ ದಿವ್ಯಸರಸಿಯ ರಾಜಹಂಸ'' ಎಂದು ಕರೆದು, ಹೊಸ ಹೋಲಿಕೆಗಳನ್ನು ಕೊಡುತ್ತಾರೆ:

ನೀನು ಇರುಳ ಚಂದ್ರನಂತೆ
ಶಾಂತ ರುಚಿರವೋ,
ನೀಲ ಬಾನ ಬಿಳಿಯ ಮುಗಿಲ
ತೆರದಿ ಸರಳವೋ !

ಪರಮಹಂಸರನ್ನು ಕುರಿತು ವಿ. ಕೃಷ್ಣಶೆಟ್ಟಿ ಅವರು 'ಅವತಾರ ಶೃಂಗ' ಎಂಬ ಮಹಾಕಾವ್ಯವನ್ನು, ಸಿ.ಪಿ.ಕೆ. ''ಶ್ರೀರಾಮಕೃಷ್ಣೋದಯ' ಎಂಬ ಖಂಡಕಾವ್ಯವನ್ನು ರಚಿಸಿರುವುದು ಉಲ್ಲೇಖನೀಯ.

೩

ಈಗ ಶ್ರೀಮಾತೆ ಶಾರದಾದೇವಿಯವರನ್ನು ಕುರಿತ ಕವಿತೆಗಳು. ಅವುಗಳ ಸಂಖ್ಯೆ ಹೆಚ್ಚೇನಿಲ್ಲ. ಕುವೆಂಪು ತಮ್ಮ 'ಮಹಾಮಾತೆ' ಎಂಬ ಪದ್ಯದಲ್ಲಿ ಅವರನ್ನು 'ಕಲಿಯುಗ ಸೀತೆ' ಎಂದು ಕರೆದಿದ್ದಾರೆ. ಈ ಸಾಲುಗಳು ಶ್ರೀಮಾತೆಯ ವ್ಯಕ್ತಿತ್ವದ ಭೂಮತೆಯನ್ನು ಪ್ರಕಟಿಸುತ್ತದೆ.

ಗಗನದಂತಿಹುದಮ್ಮ ನಿನ್ನ ಗಾಂಭೀರ್ಯ
ನಿನ್ನ ತೇಜದ ಭಾಗವೀ ನಮ್ಮ ಸೂರ್ಯ
ನೀ ಕಾಳಿ, ನೀ ಲಕ್ಷ್ಮಿ, ನೀ ಬಿಜ್ಜೆಯಮ್ಮ
ಮಕ್ಕಳಾಗಿಹ ನಮ್ಮ ಪೊರೆ, ಶಕ್ತಿಯಮ್ಮ

ಶಾರದಾ ಜನನಿಯ ನಾಮವೆ 'ಸುರನದಿಯ ತೀರ್ಥ' ಎನ್ನುವಲ್ಲಿ ನವೀನ ರೂಪಕವಿದೆ.

ಜಿ.ಎಸ್.ಎಸ್. ತಮ್ಮೊಂದು ಕವನದಲ್ಲಿ ಶಾರದಾ ಮಾತೆಯ 'ವನವಾಸ'ವನ್ನು ಪ್ರಸ್ತಾಪಿಸುತ್ತಾರೆ. ''ಶ್ರೀಮಾತೆ ಶಾರದೆಯ ನಡೆ ಹೇಗೆ? ನುಡಿ ಹೇಗೆ? ಲಜ್ಜೆಯೇ ಹೆಜ್ಜೆಯಿಟ್ಟಂತೆ!'' ಎಂದು ಸಿ.ಪಿ.ಕೆ. ಅವರ ಬಣ್ಣನೆ.

೪

ಸ್ವಾಮಿ ವಿವೇಕಾನಂದರ ಬಗೆಗೆ ಸಾಕಷ್ಟು ಕವನಗಳಿವೆ. ಮತ್ತೆ ಅಗ್ರಸ್ಥಾನ ಕುವೆಂಪು ರಚನೆಗಳಿಗೆ. ಸ್ವಾಮೀಜಿಯವರನ್ನು 'ರಾಮಕೃಷ್ಣರ ಭೀಮಶಿಷ್ಯ', 'ನವಯುಗಾಚಾರ್ಯ', 'ಸ್ಥೈರ್ಯದಚಲ', 'ಧೈರ್ಯರಂಬುಧಿ' ಎಂದು ಸಂಬೋಧಿಸುತ್ತಾರೆ. 'ನವಯುಗಾಚಾರ್ಯ' ಎಂಬುದಂತೂ ಯಥಾರ್ಥ ವಿಶೇಷಣ.

''ಬೊಮ್ಮದಂಬುಧಿಗಲೆಯನೀಯುವ ಭರದ ಬಿರುಗಾಳಿ''
''ಕುರಿಯ ದೊಡ್ಡಿಯ ಮುರಿದು ಸಿಂಹದ ಗುಡಿಯ ವಿರಚಿಸಿದೆ''

ಮುಂತಾದ ಪಂಕ್ತಿಗಳೂ ಮನನೀಯ. ''ಬುದ್ಧಿಭೈರವ' ಎಂಬುದು ಅತ್ಯಂತ ಪರಿಣಾಮಕಾರಿ ರೂಪಕ. ''ಯಮನ ನುಂಗಿದ ರಾಜಯೋಗಿಯೆ'' ಎಂಬುದೂ ಕುವೆಂಪು ಅವರ ಸುಶಕ್ತ ಸಂಬೋಧನೆ. ಅಜರಾಮರರಲ್ಲವೆ, ಸ್ವಾಮೀಜಿ? ಮಿಕ್ಕವರನ್ನು ಯಮ ನುಂಗಿದರೆ, ಯಮನನ್ನೇ ನುಂಗಿ ನೊಣೆದ ಅದ್ಭುತ, ಅಕೃತ ಚೇತನ ವಿವೇಕಾನಂದರು! ''ರುದ್ರಭೂಮಿಗಳಾಗಲೆಮ್ಮೀ ಕ್ಷುದ್ರ ಹೃದಯಗಳು!'' ಎಂಬುದು ಕವಿಯ ಹಾರೈಕೆ.

ಒಂದು ಮುಖ್ಯಾಂಶವೆಂದರೆ, ಕುವೆಂಪು ಅವರ ಉಕ್ತಿಗಳು ಮೇಲುನೋಟಕ್ಕೆ ವಕ್ರೋಕ್ತಿ, ಅತಿಶಯೋಕ್ತಿಗಳೆನಿಸಿದರೂ, ಒಳನೋಟಕ್ಕೆ ಸ್ವಭಾವೋಕ್ತಿಗಳೇ!

'ವಿವೇಕಾನಂದರ ಕೋಣೆಯನ್ನು ನೋಡಿ' ಎಂಬ ಶ್ರೀನಿವಾಸರ ಕವನದ ಈ ಪರಿಭಾವನೆ ಹೃದ್ಯವಾಗಿದೆ:

ಕಾದಿಹುದು ಅದೆ ಪೀಠ, ಅದೆ ವಸ್ತ್ರ, ಅದೆ ತಲ್ಪ;
ಕಾದಿಹುದು ಅದೆ ನಾಡು! ಅದೆ ಜನತೆ, ಅದೆ ನೋವು
ಇದು ತನ್ನದೆಂದ ಮುನ್ನವೆ ನಮ್ಮ ನೆಲಕಿಳಿದ
ಆ ಕರುಣೆ, ಒಮ್ಮೆ ತನತೆಂದ ಭೂಮಿಗೆ ಸುಳಿದು
ಬಾರದಿರುವುದೆ ಮತ್ತೆ ?

ಜಿ.ಎಸ್.ಎಸ್. ಅವರು 'ಶ್ರೀವಿವೇಕಾನಂದರಿಗೆ' ಎಂಬ ಕವನದಲ್ಲಿ, ''ರಾಮಕೃಷ್ಣರು ತಮ್ಮ ಯೋಗಧನುವಿಗೆ ತೊಟ್ಟ ಬ್ರಹ್ಮಾಸ್ತ್ರ ನೀನು!'' ಎಂಬ ಸ್ವೋಪಜ್ಞ ರೂಪಕವನ್ನು ಸೃಜಿಸುತ್ತಾರೆ. ಮತ್ತೊಂದು ಕವಿತೆಯಲ್ಲಿ,

ಕವಿ, ಋಷಿ, ಯೋಗೀ, ಸಂತ
ಲೋಕಾದ್ಯಂತ ನಡೆವ ವಸಂತ

— ಎಂದು ಉದ್ಗರಿಸುತ್ತಾರೆ.

ಇದು 'ಸಂನ್ಯಾಸಿ' ಎಂಬ ಕವನದಲ್ಲಿ ವಿ.ಸೀ. ಅವರ ರೂಪಕೋಕ್ತಿ :

ಸಂನ್ಯಾಸಿಗೆಲ್ಲಿಯದು ಲೋಕ ಬದುಕಿನ ಗೊಡವೆ
ಎನುತಿದ್ದ ಬಂಜೆನುಡಿ ಅಮರವಾಯಿತ್ತಂದು
ಬ್ರಹ್ಮ ನಕ್ಕಿತು, ನಲಿವು ಹಣ್ಣಾಯಿತು.

ಇಲ್ಲಿಗೆ ಈ ಸ್ಥೂಲ ಸಮೀಕ್ಷೆಯನ್ನು ಮುಗಿಸಬಹುದು.

* * * *

ಮೈ.ಶೇ.ಅನಂತಪದ್ಮನಾಭರಾವ್, ವಿನಾಯಕ, ಮಧುರಚೆನ್ನ, ರಾಘವ, ಸೇಡಿಯಾಪು ಕೃಷ್ಣಭಟ್ಟ, ಎಂ.ರಾಮಕೃಷ್ಣ, ಕಡೆಂಗೋಡ್ಲು ಶಂಕರಭಟ್ಟ, ಅರ್ಚಕ ವೆಂಕಟೇಶ, ಹೆಮ್ಮಿಗೆ ದೇಶಿಕಾಚಾರ್ಯ, ನಾರಾಯಣ ಸಂಗಮ, ತೆಕ್ಕುಂಜೆ ಗೋಪಾಲ ಕೃಷ್ಣಭಟ್ಟ, ಆರ್.ಜಿ. ಕುಲಕರ್ಣಿ, ಕೆ. ಭೈರವಮೂರ್ತಿ, ಕೆ.ನ. ಶಿವತೀರ್ಥನ್, ಎಲ್.ಜಿ.ಸುಮಿತ್ರ, ಅಮೃತ ಸೋಮೇಶ್ವರ, ವೈ.ಎಸ್. ಲೂಯಿಸ್ ಮುಂತಾದವರೂ ದಿವ್ಯತ್ರಯರ ಬಗೆಗೆ ಕವನಗಳನ್ನು ಕಟ್ಟಿದ್ದಾರೆ. ಅನೇಕ ಕವನಗಳಲ್ಲಿ ಭಕ್ತಿ, ಶ್ರದ್ಧೆ, ಶರಣಾಗತಿ ಭಾವಗಳು ವಾಚ್ಯಪ್ರಧಾನವಾಗಿ ವ್ಯಕ್ತವಾಗಿದ್ದರೂ, ಧ್ವನಿಯುಕ್ತವಾದ ಕಾವ್ಯಾಂಶಗಳೂ ಅಲ್ಲಲ್ಲಿ ಮಿರುಗುತ್ತವೆ, ಅನಿವಾರ್ಯವಾಗಿ. (ಇಡೀ 'ಕಾವ್ಯಸಾಹಿತ್ಯ'ಕ್ಕೇ ಅನ್ವಯಿಸುವ ಮಾತಿದು): ದಿವ್ಯತ್ರಯರ ಜೀವನಕಥೆಗಳೇ ಮೂಲತಃ ಮಹಾಕಾವ್ಯಗಳಲ್ಲವೆ?